**ದಿನಾಂಕಃ 03.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದುವರಿದ ಪಾಟಿ ಸವಾಲುಃ ಶ್ರೀ ಡಿ.ಎಸ್.ಎಸ್. ವಾದಿ ಪರ ವಕೀಲರಿಂದ**

ನಿಡಿ.37 ರಿಂದ 70 ರ ದಾಖಲೆಗಳು ಗೌಡಗೆರೆ ಗ್ರಾಮದ ರೀ ಸರ್ವೆ ನಂಬರ್ 3 ಮತ್ತು 28 ಜಮೀನುಗಳಿಗೆ ಸಂಬಂದಿಸಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ಗಳನ್ನು ವಿಭಾಗ ಮಾಡಿಕೊಂಡಿರುವ ಕಾರಣ ಪಹಣಿಯಲ್ಲಿ ಪೈಕಿ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.ನಿಡಿ.37 ರಿಂದ 70 ರ ದಾಖಲೆಗಳು ವಾದಿಯರಿಗೆ ಸೇರಿದ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಡಿ.37 ರಿಂದ 70 ರ ದಾಖಲೆಗಳಲ್ಲಿ ಪೈಕಿ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಡಿ.37 ರಿಂದ 70 ರ ದಾಖಲೆಗಳನ್ನು 1/3 ಭಾಗದ ಸಲುವಾಗಿ ಸಲ್ಲಿಸಿರುತ್ತೇನೆ. ನಿಡಿ.37 ರಿಂದ 70 ರ ದಾಖಲೆಗಳ ಪ್ರಕಾರ ವಾದಿಯರ ಹೆಸರಿನಲ್ಲಿ ವಿಭಾಗದ ಪ್ರಕರ ಪ್ರತ್ಯೇಕವಾಗಿ ಪಹಣಿಗಳನ್ನು ಬಂದಿರುತ್ತವೆ ಎಂದರೆ ಸರಿಯಲ್ಲ. ನಿಡಿ.37 ರಿಂದ 70 ರ ದಾಖಲೆಗಳು ವಾದಿಯ ದಾವೆಯನ್ನು ಸಾಬೀತು ಪಡಿಸಲು ಪೂರಕವಾಗಿರುತ್ತದೆ ಎಂದರೆ ಸರಿಯಲ್ಲ.



ನನ್ನ ಪ್ರತಿವಾದ ಪತ್ರದಲ್ಲಿರುವ ವಿಷಯವನ್ನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದ ಪತ್ರದ 5 ನೇ ಪುಟದಲ್ಲಿ ಸರ್ವೆ ನಂಬರ್ 3 ಮತ್ತು 28 ರ ಜಮೀನುಗಳಲ್ಲಿ ಕೆಲವು ಭಾಗಗಳನ್ನು ಮಾರಾಟ ಮಾಡಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಜಮೀನನ್ನು ಮಾರಾಟ ಮಾಡಿದ್ದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರು ಪಡಿಸಲು ಯಾವುದೇ ದಾಖಲೆಗಳು ಇಲ್ಲ. ದಾಖಲೆಗಳು ಇದ್ದರೂ ಸಹಾ ನ್ಯಾಯಾಲಯದಿಂದ ಮರೆ ಮಾಚುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದುರ್ಗದ ರಂಗಪ್ಪ ರವರಿಗೆ ಸಣ್ಣ ತಿಮ್ಮಯ್ಯ, ದೊಡ್ಡ ರಂಗಪ್ಪ ಮತ್ತು ಸಣ್ಣ ರಂಗಪ್ಪ ಎಂಬ ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ರೀ ಸರ್ವೆ ನಂಬರ್ 3 ರಲ್ಲಿ 7 ಎಕರೆ 21 ಗುಂಟೆ ಜಮೀನು ಸಣ್ಣ ತಿಮ್ಮಯ್ಯನ ಮಕ್ಕಳಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದೊಡ್ಡರಂಗಪ್ಪನ ಮಕ್ಕಳು ಕೆಲವು ಭಾಗಗಳನ್ನು ಮಾರಾಟ ಮಾಡಿದ್ದು, ಕೆಲವು ಜಮಿನುಗಳನ್ನು ಹಾಗೆಯೇ ಉಳಿಸಿಕೊಡಿದ್ದಾರೆ

ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಒಟ್ಟು ಕುಟುಂಬದಲ್ಲಿ ಮಾರಾಟ ಮಾಡಲಾಗಿದೆ ಎಂದು ನುಡಿಯುತ್ತಾರೆ. ರೀ ಸರ್ವೆ ನಂಬರ್ 3 ರಲ್ಲಿ 5 ಎಕರೆ 21 ಗುಂಟೆ ಜಮೀನು ಸಣ್ಣ ರಂಗಪ್ಪನ ಮಕ್ಕಳಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ವಾಸ್ತವ ಸಂಗತಿಗಳನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ಗೊಂದಲ ಉಂಟು ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.